ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೆ ಏನಂತಿ ಮಾಡಿಕೊಳ್ಳುತ್ತೇನೆ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯಿಂದ ಯಾವ ಘಟಕಗಳು ಆರಂಭವಾಗಿರುತ್ತವೋ ಅವುಗಳಿಗೆ ಕಾಯಕಲ್ಪ ಕೊಡುವ ಮತ್ತು ಪುನರ್ ವಸತಿ ವ್ಯವಸ್ಥೆ ಮಾಡುವ ಮೊದಲು, ಇವತ್ತು ಪೋಲೀಸ್ ಕಂಪ್ಲೇಂಟನ್ನು ಕೊಟ್ಟು ರಿಕವರಿಗೆ ಆದೇಶ ಕೊಡುವಂಥಾದ್ದು ನಿಮ್ಮ ಘಟಕಗಳಿಂದ ಮತ್ತು ಇಲಾಖೆಯಿಂದ ಆಗುತ್ತಾ ಇದೆ. ಇದಕ್ಕೆ ಅವಕಾಶ ಕೊಡಬೇಡಿ ಎನ್ನುವಂತಹ ಏನಂತಿಯನ್ನು ಮಾಡುತ್ತಿದ್ದೇನೆ. ವಿಶೇಷವಾಗಿ ಈ ಸಣ್ಣ ಘಟಕಗಳು ಎಂದರೆ, 100 ಹೆಚ್.ಪಿ.ವರೆಗೆ ಇರುವಂತಹ ಘಟಕಗಳು ಹಿಂದೆ ಹೆಚ್.ಟಿ.ವ್ಯಾಪ್ತಿಗೆ ಬರದೇ ಇದ್ದರೆ, ಇವತ್ತು 60 ಹೆಚ್.ಪಿ. ಘಟಕಗಳಿಗೂ ಅಳವಡಿಸುವಂತಹ ಕಾನೂನನ್ನು ಮಾಡಿದ್ದೀರಿ. ಇದರಿಂದ ಸಣ್ಣ ಘಟಕಗಳು ಕೂಡ 8 ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುವಂತಹ ದುಸ್ಥಿತಿ ಬಂದಿದೆ. ಅಷ್ಟು ಮಾತ್ರವಲ್ಲ, ಪೊಲ್ಯೂಷನ್ ಬೋರ್ಡ್‌ಗಳು, ರಿಜಿಸ್ಟ್ರೇಷನ್ ಸಂದರ್ಭದಲ್ಲಿ ಅಥವಾ ಯಾವ ಸಂದರ್ಭದಲ್ಲಿ ತಪಾಸಣೆ ಮಾಡಬೇಕೋ ಅದನ್ನು ಬಿಟ್ಟು ಸೌಂಡ್ ಪೊಲ್ಯೂಷನ್‌ಗೆ 10 ಸಾವಿರ, ಇನ್ನೊಂದು ಪೊಲ್ಯೂಷನ್‌ಗೆ ಏಳು ಸಾವಿರ ಎಂದು ನಿಗದಿ ಮಾಡಿ, ನಿರಂತರವಾಗಿ ತೊಂದರೆ ಕೊಡುತ್ತಿದ್ದಾರೆ. ಇದಲ್ಲದೇ ಬ್ಯಾಲೆನ್ಸ್ ಷೀಟನ್ನು ಕೇಳುವಂಥಾದ್ದು ನಡೆಯುತ್ತಾ ಇದೆ. ಆದ್ದರಿಂದ ನಾನು ತಮ್ಮ ಮೂಲಕ ಏನಂತಿ ಮಾಡುವಂಥಾದ್ದು, ಖರೀದಿ ನೀತಿ ಬಗ್ಗೆ ಸ್ಪಷ್ಟವಾದ ನಿಯಮಗಳನ್ನು ಮಾಡಬೇಕು. ಮತ್ತು ಸ್ಥಳೀಯ ಘಟಕಗಳಿಗೆ ಖರೀದಿ ಮಾಡಲಿಕ್ಕೆ ಅವಕಾಶವಾಗುವ ನಿಟ್ಟಿನಲ್ಲಿ ತಾವು ಆದೇಶವನ್ನು ಹೊರಡಿಸಬೇಕೆಂಬ ವಿಶೇಷ ಏನಂತಿಯನ್ನು ತಮ್ಮ ಮೂಲಕ ಸರ್ಕಾರದವರಿಗೆ ಮಾಡಲಿಕ್ಕೆ ಇಚ್ಚಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಈ ವಿಷಯವನ್ನು ಸಣ್ಣ ಕೈಗಾರಿಕಾ ಮುಂತ್ರಿಗಳ ಗಮನಕ್ಕೆ ತರುತ್ತೇನೆ.

(ಉ) ಹಾಸನ ಫಸ್ಟ್ ಗ್ರೇಡ್ ಕಾಲೇಜಿನ ಆಟದ ಮೈದಾನದಲ್ಲಿ ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿ ಮನೆ ಕಟ್ಟುತ್ತಿರುವುದು.

+ ಶ್ರೀ ಕೆ.ಹೆಚ್.ಹನುಮೇಗೌಡ(ಹಾಸನ): ಸನ್ಮಾನ್ಯ ಅಧ್ಯಕ್ಷರೇ, ಹಾಸನದಲ್ಲಿ ಫಸ್ಟ್ ಗ್ರೇಡ್ ಕಾಲೇಜ್ ಇದೆ. ಇಲ್ಲಿ ಸುಮಾರು ಎರಡು - ಎರಡೂವರೆ ಸಾವಿರ ಬಾಲಕಿಯರು ಮತ್ತು ಬಾಲಕರು ವ್ಯಾಸಂಗ ಮಾಡುತ್ತಿದ್ದಾರೆ, ಈಗ್ಗೆ ನಾಲ್ಕು ವರ್ಷಗಳ ಹಿಂದೆ ಸುಮಾರು 15-20 ಜನ ಸೇರಿಕೊಂಡು ಫಸ್ಟ್ ಗ್ರೇಡ್ ಕಾಲೇಜು ಆಟದ ಮೈದಾನದಲ್ಲಿ 7-8 ಎಕರೆಯನ್ನು ವಶಪಡಿಸಿಕೊಂಡಿದ್ದಾರೆ. ಇದು ಸುಮಾರು 15-20 ಕೋಟಿ ರೂಪಾಯಿ ಬೆಲೆ ಬಾಳತಕ್ಕ ಪ್ರದೇಶ. ಇದನ್ನು ಒತ್ತುವರಿ ಮಾಡಿಕೊಂಡು ಆ ಜಾಗದಲ್ಲಿ ಈಗಾಗಲೇ ಮನೆ ಕಟ್ಟಿಕೊಂಡಿದ್ದಾರೆ. ಕಳೆದ ಮೂರು ದಿವಸದಲ್ಲಿ ಆ ಕಾಲೇಜು ಮೀಟಿಂಗ್‌ಗೆ ಹೋಗಿದ್ದಾಗ, ಅಲ್ಲಿಯ ಹುಡುಗರು ಧರಣಿ ಮಾಡುತ್ತೇವೆಂದು ಕುಳಿತಿದ್ದರು. ಅದಕ್ಕೆ

ನಾನು ಅವರಿಗೆ ಹೇಳಿದೆ. ನೀವು ವಿದ್ಯಾರ್ಥಿಗಳು, ವಿದ್ಯಾಭ್ಯಾಸವನ್ನು ಹಾಳು ಮಾಡಿಕೊಂಡು ಚಳುವಳಿಗೆ ಹೋಗಬೇಡಿ. ಸರ್ಕಾರ ಇದೆ, ನಾನು ಶಾಸನ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ, ಅದನ್ನು ಎನ್‌ಕ್ವೈರಿ ಮಾಡಿಸಿ, ಆ ಜಾಗ 8 ಎಕರೆ ಒತ್ತುವರಿಯಾಗಿರುವುದನ್ನು ಖಿಲ್ಲಾ ಮಾಡಿಸಿಕೊಡುತ್ತೇನೆಂದು ಹೇಳಿ ಬಂದಿದ್ದೇನೆ. ಸ್ವಾಮಿ, ಇದು ತತ್‌ಕ್ಷಣ ಆಗದೇ ಹೋದರೆ, ಅಲ್ಲಿರುವಂತಹ 2-3 ಸಾವಿರ ಹುಡುಗರು ದೊಡ್ಡ ಹೋರಾಟವನ್ನು ಪ್ರಾರಂಭ ಮಾಡುತ್ತಾರೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ. ಅವರು ಯಾರದೋ ಚಿತಾವಣೆ ಮೇಲೆ ಆಕ್ರಮಣ ಮಾಡಿ, ಆ ಜಮೀನನ್ನು ಸ್ವಾಧೀನಪಡಿಸಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿ, ಆ ಜಾಗವನ್ನು ಖಿಲ್ಲಾ ಮಾಡಿಸಿಕೊಡಬೇಕೆಂದು, ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಡಾ॥ಜಿ.ಪರಮೇಶ್ವರ್(ಮಾನ್ಯ ಉನ್ನತ ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣ ಅಲ್ಲಿಗೆ ಕಳುಹಿಸಿ, ಎನ್‌ಕ್ವೈರಿ ಮಾಡಿಸಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(ಊ) ಕಾಫಿ ಬೆಳೆಗಾರರ ಸಂಕಷ್ಟದ ಪರಿಸ್ಥಿತಿ ಕುರಿತು

ಶ್ರೀ ಎಂ.ಪಿ.ಅಪ್ಪಚ್ಚುರಂಜನ್(ಸೋಮವಾರಪೇಟೆ): ಸನ್ಮಾನ್ಯ ಅಧ್ಯಕ್ಷರೇ, ಕೊಡಗಿನ ಕಾಫಿ ಬೆಳೆಗಾರರು ಮತ್ತು ರಾಜ್ಯದ ಎಲ್ಲಾ ಮೂಲೆ ಮೂಲೆಗಳಲ್ಲಿರುವಂತಹ ಕಾಫಿ ಬೆಳೆಗಾರರು ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಅಂತಹ ಸಂದರ್ಭದಲ್ಲಿ ನಮ್ಮ ಕೃಷಿ ಮಾರುಕಟ್ಟೆಯಿಂದ ಒಂದು ಅಧಿಸೂಚನೆಯನ್ನು ಹೊರಡಿಸಿದ್ದಾರೆ. 6-7-2001ನೇ ಇಸವಿಯಿಂದ ಹೊರಡಿಸಿರುವ ಅಧಿಸೂಚನೆಯಲ್ಲಿ ಕಾಫಿಗೆ ಎರಡು ಪರ್ಸೆಂಟ್ ಸೆಸ್‌ನ್ನು ಕಟ್ಟಬೇಕೆಂದು ಹೇಳಿದ್ದಾರೆ. ಕಾಫಿ ಬೆಳೆಗಾರರು ಗುಂಡಿಯಲ್ಲಿ ಬಿದ್ದುಕೊಂಡಿರುವಾಗ, ಅವರಿಗೆ ಕೈಯನ್ನು ಕೊಟ್ಟು ಎತ್ತುವ ಕೆಲಸವನ್ನು ಮಾಡುವುದು ಬಿಟ್ಟು ಅಲ್ಲಿಗೆ ಕಲ್ಲು ಹಾಕಿ, ಅವರಿಗೆ ಸಮಾಧಿ ಮಾಡುವ ಕೆಲಸವನ್ನು ದಯವಿಟ್ಟು ಮಾಡಬೇಡಿ, ಸಂಬಂಧಪಟ್ಟ ಮಂತ್ರಿಗಳು ಚಿಕ್ಕಮಗಳೂರಿನವರಿದ್ದೀರಿ, ತಾವು ಇದನ್ನು ಪರಿಶೀಲನೆ ಮಾಡಿ, ಕೃಷಿ ಮಾರುಕಟ್ಟೆಯ ವತಿಯಿಂದ ಹೊರಡಿಸಿರುವ ಅಧಿಸೂಚನೆಯಲ್ಲಿರುವಂತೆ ಎರಡು ಪರ್ಸೆಂಟ್ ಸೆಸ್‌ನ್ನು ಕೈಬಿಡುವ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಆರ್.ಎಂ.ಪಿ.ಯವರು ಪ್ರಪೋಸ್ ಮಾಡಿದ್ದಾರಷ್ಟೆ. ಆ ಪ್ರಪೋಸಲ್‌ಗೆ ಅಬ್ಜಕ್ಷನ್ ಹಾಕುವುದಕ್ಕೆ ಇನ್ನೂ ಸಮಯ ಇದೆ. ಅಲ್ಲಿ ನೀವು